ಅನುಭವಸ್ಥಳಾಗಿದ್ದಾಳೆಂಬುದನ್ನು ಅದನ್ನು ಓದುವುದರಿಂದಲೇ ಅರಿತುಕೊಳ್ಳಬಹುದು. ಇಷ್ಟು ಜ್ಞಾನಿಯಾದ ಬ್ರಾಹ್ಮಣ ಸ್ತ್ರೀಯು ಕ್ರೈಸ್ತ ಮತವನ್ನವಲಂಬಿಸಿರುವಳು. ಎರಡನೆಯದು ಯಾತ್ರಿಕನ ಸಂಚಾರವೆಂಬುದು, ಅದನ್ನು ಇಂಗ್ಲಿಷಿನಲ್ಲಿ ಯೋಹಾನ ಬುನ್ಯನ್ ಎಂಬ ಪ್ರಸಿದ್ಧ ಗ್ರಂಥಕರ್ತನು ಬರೆದನು. ಈ ಸಂಸಾರಸಾಗರದಲ್ಲಿ ಬರತಕ್ಕ ಕಷ್ಟಗಳು ಇಂತಹವು, ಇವುಗಳನ್ನು ನಿವಾರಿಸಿಕೊಳ್ಳುವುದಕ್ಕೆ ಉಪಾಯವು ಇಂತಹದು ಎಂಬದಾಗಿ ಅದು ತಿಳುಹಿಸುವುದು. ಇವೆರಡನ್ನೂ ನನ್ನ ಮೇಲಣ ಪ್ರೀತಿಗಾಗಿ ಸ್ವೀಕರಿಸಿರಿ. ಮತ್ತು ಇದನ್ನು ಓದಿ ಆನಂದಪಡಿರಿ.ನಿಮ್ಮ ಕಷ್ಟವು ಶೀಘ್ರವಾಗಿ ಪರಿಹಾರವಾಗಲೆಂದು ಸತತವೂ ಭಗವಂತನನ್ನು ಪ್ರಾರ್ಥಿಸುತ್ತಿರುವ,

ನಿಮ್ಮ ಪ್ರೀತಿಯುಳ್ಳ
ವಯೋಲತ ಗುಡ್‌ವಿಲ್'

ನಂತರ ಜನಾರ್ದನಾಚಾರ್ಯ ಪ್ಲೇಗ್ ಸಾಂಕ್ರಾಮಿಕ ರೋಗಕ್ಕೆ ಬಲಿಯಾಗುತ್ತಾನೆ. ಕಾಶೀಬಾಯಿ ಮತ್ತೆ ಊರಿಗೆ (ಬೆಂಗಳೂರಿಗೆ) ಬರುತ್ತಾಳೆ. ಗುಡ್‌ವಿಲ್ ಮಿಸಿ ಈ ಕುಟುಂಬಕ್ಕೆ ಸಹಾಯಮಾಡುತ್ತಾಳೆ. ಗಾಳಿಬೆಳಕು ಆಡುವ ಒಳ್ಳೆಯ ಬಾಡಿಗೆ ಮನೆಗೆ ಈ ಕುಟುಂಬವನ್ನು ಸ್ಥಳಾಂತರಿಸುತ್ತಾಳೆ. (ಪ್ಲೇಗ್ ರೋಗ ಮತ್ತು ಗಾಳಿ ಬೆಳಕು ಆಡದ ಮನೆಗಳು ಸಾಂಕೇತಿಕವಾಗಿವೆ). ಹೇಮಲತೆಯ ಮನೆಪಾಠ ಪುನರಾರಂಭವಾಗುತ್ತದೆ. ಕಾಶೀಬಾಯಿಯೂ ಕನ್ನಡವನ್ನು ಓದಿ ಬರೆಯಲು ಕಲಿಯುತ್ತಾಳೆ. ಗುಡ್‌ವಿಲ್ ಮಿಸಿಯ ಸಂಪಾದಕತ್ವದ ಪತ್ರಿಕೆಯೊಂದರಲ್ಲಿ ಹೇಮಲತೆ ಧಾರಾವಾಹಿ 'ಕಥೆ'ಯನ್ನೂ ಬರೆಯುತ್ತಾಳೆ.

ಪ್ರಭಾಕರ ಮದ್ರಾಸಿಗೆ ಬಿ.ಎ. ಪರೀಕ್ಷೆಗಾಗಿ ಹೋದಾಗ ಕ್ರೈಸ್ತ ಪಾದ್ರಿ ಘನ (ಬಹುಶಃ ರೆವರೆಂಡ್ ಎನ್ನುವುದಕ್ಕೆ ಬಳಸಿದ ಪದ) ವೇದಮಿತ್ರ್ಯೆಯ ಅವರು ರೈಲಿನಲ್ಲಿ ಪರಿಚಯವಾಗುತ್ತಾರೆ. ಮದ್ರಾಸಿನ ತಮ್ಮ ನಿವಾಸದ ಬಳಿಯೇ ಅವನಿಗೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಿಕೊಡುತ್ತಾರೆ. ಪರೀಕ್ಷೆ ಮುಗಿದ ಬಳಿಕ ಪ್ರಭಾಕರ ಅವರ ಬಳಿ ಧರ್ಮದ ಬಗ್ಗೆ ಚರ್ಚಿಸುತ್ತಾನೆ. ಪಾದ್ರಿಯು ಅವನಿಗೆ ಬೈಬಲ್‌ನ ಪ್ರತಿಯನ್ನು ಉಡುಗೊರೆಯಾಗಿ ಕೊಟ್ಟು ಓದಲು ಹೇಳುತ್ತಾರೆ. ಬೆಂಗಳೂರಿಗೆ ಹಿಂತಿರುಗಿದ ಮೇಲೆ ಕ್ರೈಸ್ತ ಧರ್ಮದ ಬಗ್ಗೆ ಸಂಶಯಗಳಿದ್ದರೆ ಗುಡ್‌ವಿಲ್ ಮಿಸಿ ಅನ್ನು ಭೇಟಿಯಾಗಬಹುದೆಂದು ತಿಳಿಸುತ್ತಾನೆ. ಹಾಗೆ ಪ್ರಭಾಕರ ಗುಡ್‌ವಿಲ್ ಮಿಸಿಯವರ ಪ್ರಭಾವಕ್ಕೆ ಒಳಗಾಗುತ್ತಾನೆ. ಪ್ರಚ್ಛನ್ನ ಕ್ರೈಸ್ತನಾಗುವ ಪ್ರಭಾಕರ ಪ್ರತಿ ಭಾನುವಾರ ಚರ್ಚಿಗೆ ಹೋಗಿ ಪ್ರಾರ್ಥಿಸುತ್ತಾನೆ.

ಪ್ರಭಾಕರ ಮುಂದೆ ಕಾನೂನು ಪದವಿಯನ್ನು ಪಡೆಯಲು ಮದ್ರಾಸಿನ ಲಾ ಕಾಲೇಜಿಗೆ ಸೇರುತ್ತಾನೆ. ವಕೀಲಿ ವೃತ್ತಿಯನ್ನೂ ಪ್ರಾರಂಭಿಸುತ್ತಾನೆ, ಯಶಸ್ವಿ ವಕೀಲನಾಗಿ ಸಮಾಜದಲ್ಲಿ ಗಣ್ಯನಾಗುತ್ತಾನೆ.

ಇತ್ತ ಹೇಮಲತೆಗೆ ಮರುಮದುವೆ ಮಾಡುವ ಇಚ್ಛೆಯನ್ನು ಕಾಶಿಬಾಯಿ ಗುಡ್‌ವಿಲ್ ಮಿಸಿಗೆ ತಿಳಿಸುತ್ತಾಳೆ. ಆಗ ಮಿಸಿ ಪ್ರಭಾಕರನೇ ಅವಳಿಗೆ ಸೂಕ್ತ ವರನೆಂದು ಯೋಚಿಸಿ ಅವನನ್ನು ಬೆಂಗಳೂರಿಗೆ ಕರೆಸುತ್ತಾರೆ. ಇಬ್ಬರಿಗೂ ಈ ಸಂಬಂಧ ಒಪ್ಪಿಗೆಯಾಗುತ್ತದೆ. ಹೇಮಲತೆ ಮತ್ತು ಪ್ರಭಾಕರ ಮದ್ರಾಸಿನಲ್ಲಿ ಮದುವೆಯಾಗುತ್ತಾರೆ. ಇವರಿಬ್ಬರ ಮದುವೆ ಮಿಷನರಿಗಳ ನೇತೃತ್ವದಲ್ಲಿ ನಡೆಯುತ್ತದೆ. ಯುರೋಪಿಯನ್ನರೂ ಅದರಲ್ಲಿ ಭಾಗವಹಿಸುತ್ತಾರೆ. ವಿವಾಹವು ಸರಳವಾಗಿ ನಡೆಯುತ್ತದೆ; ರಾಜಮಹೇಂದ್ರದ ಬ್ರಾಹ್ಮಣ ಪುರೋಹಿತರೇ ಮದುವೆ ಮಾಡಿಸುತ್ತಾರೆ. ಸಂಜೆ ಪ್ರಮುಖ ವ್ಯಕ್ತಿಯೊಬ್ಬರು ವಿಧವಾ ಪುನರ್ವಿವಾಹದ ಕುರಿತು ಭಾಷಣ ಮಾಡುತ್ತಾರೆ.

ಕಾದಂಬರಿಯಲ್ಲಿ ಹೇಮಲತೆ ಮತ್ತು ಪ್ರಭಾಕರ ಇಬ್ಬರೂ ಕ್ರಿಶ್ಚಿಯನ್ ಧರ್ಮವನ್ನು ಸ್ವೀಕರಿಸುವ ಕಥೆಯಿಲ್ಲ; ಆದರೆ ಇಬ್ಬರೂ ಕ್ರೈಸ್ತರಂತೆಯೆ ಬದುಕುತ್ತಾರೆ. ಅವರು ವಿಗ್ರಹ ಪೂಜೆಯನ್ನು ಬಿಡುತ್ತಾರೆ ಮತ್ತು ಸರ್ವಶಕ್ತ ದೇವರನ್ನು ತಮ್ಮದೇ ಆದ ರೀತಿಯಲ್ಲಿ, ತಮ್ಮದೇ ಭಾಷೆಯಲ್ಲಿ ಮಂಡಿಯೂರಿ ಕುಳಿತು ಪ್ರಾರ್ಥಿಸುತ್ತಾರೆ. ಅವರ ಜತೆಯಲ್ಲಿ ಪ್ರಭಾಕರನ ತಂದೆಯೂ, ಹೇಮಲತೆಯ ತಾಯಿ ಕಾಶೀಬಾಯಿಯೂ ವಾಸಿಸುತ್ತಾರೆ. ಎಲ್ಲರಿಗೂ ಹೊಸ ಪ್ರಾರ್ಥನೆಯ ಪದ್ಧತಿ, ಹೊಸ ವಿಚಾರಗಳು ಹಿಡಿಸುತ್ತವೆ.

ಕಾದಂಬರಿಯ ಕೊನೆಗೆ ಹೇಮಲತೆ ಮತ್ತು ಪ್ರಭಾಕರ ಇನ್ನೂ ಕ್ರಿಶ್ಚಿಯನ್ ಧರ್ಮಕ್ಕೆ